# ಯುದ್ಧ-ಶಾಂತಿ, ಬದುಕು-ಸಾವುಗಳ ನಡುವೆ 'ಯಾದ್ ವಶೇಮ್'

ನಂದಿನಿ ಎ.ಆರ್.

ಸಂಶೋಧನಾರ್ಥಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ.

DOI: https://doi.org/10.5281/zenodo.15791399

## ABSTRACT:

**"ದಯವಿಲ್ಲದ ಧರ್ಮವದೇವುದಯ್ಯ**
**ದಯವೇ ಬೇಕು ಸರ್ವ ಪ್ರಾಣಿಗಳೆಲ್ಲರಲ್ಲಿ**
**ದಯವೇ ಧರ್ಮದ ಮೂಲವಯ್ಯ"**

ಎಂಬ ಬಸವಣ್ಣನವರ ಉಕ್ತಿಯಂತೆ ಸಕಲ ಧರ್ಮದ ಸಾರವೂ ಪ್ರೀತಿ, ಕರುಣೆ, ದಯೆಯೇ ಆಗಿದೆ. ಇದನ್ನು ಮತ್ತೊಮ್ಮೆ ನೆನಪಿಸುವಂತೆ 2007ರಲ್ಲಿ ನೇಮಿಚಂದ್ರರ 'ಯಾದ್ ವಶೇಮ್' ಪ್ರಕಟವಾಯಿತು. ಅದನ್ನೇ ಅವರು 'ನೂರು ಸಾವಿರ ಸಾವಿನ ನೆನಪು' ಎಂಬ ಹೆಸರಿನಲ್ಲಿ ಸುಧಾ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಗೋರಿಗಳು ಸಹ ಒಂದು ಉತ್ಕೃಷ್ಟ ಕೃತಿಗೆ ಕಥಾವಸ್ತುವಾಗಬಹುದು ಎಂದು ಇದರಿಂದ ತಿಳಿಯುತ್ತದೆ. ಇಲ್ಲಿ ಹಿಟ್ಲರ್‌ನ ನೆಲದಿಂದ ಗಾಂಧಿಯ ನೆಲವಾದ ಮುಕ್ಕೋಟಿ ದೇವರುಗಳಿಗೆ ಹೆಸರಾದ ಭಾರತಕ್ಕೆ ಬಂದ ಪುಟ್ಟ ಯಹೂದಿ ಬಾಲಕಿ ಹ್ಯಾನಾಳ ಕಥೆ. ಒಂದು ಕಾಲ್ಪನಿಕ ಕಥೆಯನ್ನು ಸೃಷ್ಟಿಸಿ ಆ ಮೂಲಕ ಧರ್ಮದ ಹೆಸರಿನಲ್ಲಿ ಹಿಟ್ಲರ್ ನಡೆಸಿದ ಕ್ರೌರ್ಯ, ಹಿಂಸೆ, ರಕ್ತಪಾತ, ಅತ್ಯಾಚಾರಗಳ ಒಂದು ದುರಂತ ಚಿತ್ರಣವನ್ನೇ ನೇಮಿಚಂದ್ರರು ನೀಡುತ್ತಾರೆ. ಹಿಟ್ಲರ್‌ನ ಭೀಕರ ಧರ್ಮಾಂಧತೆಯಿಂದ ಉರಿದ ಜರ್ಮನಿ ಜನ, ಅವರ ಬದುಕು ಸಾವುಗಳ ಚಿತ್ರಣವನ್ನು ಬಹಳ ಮನೋಜ್ಞವಾಗಿ ನಿರೂಪಿಸಿದ್ದಾರೆ. ಜೊತೆಗೆ ಭಾರತವು ಬಹುಧರ್ಮೀಯ ರಾಷ್ಟ್ರವಾಗಿದ್ದರೂ ಇಲ್ಲಿರುವ ಧರ್ಮ ಸಹಿಷ್ಣುತ ಮನೋಭಾವ, ಪ್ರೀತಿ, ಪರಸ್ಪರ ಸಹಕಾರ ಎಲ್ಲದರ ಬಗ್ಗೆ ಹ್ಯಾನಾಳ ಮೂಲಕ ನಿರೂಪಿಸಿ ಭಾರತದಲ್ಲಿ ಹ್ಯಾನಾಳಾಗಿ ಯೋಚಿಸುವ ನಾಯಕಿ, ಯಹೂದಿಗಳ ನೆಲೆಯಲ್ಲಿ ಅಪ್ಪಟ ಭಾರತೀಯ ಸ್ತ್ರೀ ಅನಿತಾಳಾಗಿ ವರ್ತಿಸುವ, ಚಿಂತಿಸುವ ಹಾಗೂ ಭಾರತಕ್ಕೆ ಮರಳಲು ತವಕಿಸುವ ಮೂಲಕ ಬೀಜವು ಯಾವ ಭೂಮಿಯ ಮೇಲೂ ಬಿದ್ದರೂ ಅದು ಚಿಗುರೊಡೆದು ಬೆಳೆದು ತನ್ನ ಕ್ಷೇತ್ರವನ್ನು ವಿಸ್ತರಿಸಿ ನೆಲೆನಿಲ್ಲುತ್ತದೆ ಎಂಬುದನ್ನು ಅನಿತಾಳ ಮೂಲಕ ನೇಮಿಚಂದ್ರರು ನಿರೂಪಿಸಿದ್ದಾರೆ.

ಸಕಲ ಧರ್ಮದ ಸಾರವು ದಯೆಯೆಂದು ಭಾವಿಸಿ ಸಹಿಷ್ಣುತ ದೃಷ್ಟಿಯಿಂದ ಜೀವಿಸಿದರೆ ಯುದ್ಧವೆಂಬುದೇ ಇಲ್ಲ. ಬದುಕನ್ನು ನೆಮ್ಮದಿಯಿಂದ ಸಾಗಿಸಬಹುದಾಗಿದೆ. ಆದರೆ ಪ್ರಸ್ತುತ ಜಗತ್ತಿನಲ್ಲಿ ಮಾನವ ಎಷ್ಟೋ ತಾಂತ್ರಿಕವಾಗಿ ಮುಂದುವರಿದಿದ್ದೇನೆ ಎಂದು ಹೇಳಿದರೂ ಸಹ ದಿನದಿಂದ ದಿನಕ್ಕೆ ಅವನ ಮನಸ್ಸು ಸಂಕುಚಿತಗೊಳ್ಳುತ್ತಿದೆ. ಮನುಷ್ಯನ ಬದುಕಿನಲ್ಲಿ ತಾಳ್ಮೆ, ಸಂಯಮ, ಪ್ರೀತಿ, ಕರುಣೆ, ದಯೆ ಎಂಬ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಇದರಿಂದ ಬದುಕು ದಿನದಿಂದ ದಿನಕ್ಕೆ ಸಂಕೀರ್ಣವಾಗುತ್ತಾ ಸಾಗಿ ಒತ್ತಡಗಳು ಹೆಚ್ಚುತ್ತಿವೆ. ದುಡ್ಡಿಗಾಗಿ

ತಂದೆ ತಾಯಿಯನ್ನೇ ಕೊಲ್ಲುವ ಸ್ಥಿತಿ ಬಂದೊದಗಿದೆ, ತಂದೆಯೇ ಮಗಳ ಮೇಲೆ ಅತ್ಯಾಚಾರ ಮಾಡುತ್ತಿದ್ದಾರೆ, ವಯಸ್ಸಾದ ತಂದೆ-ತಾಯಿಗಳನ್ನು ವೃದ್ಧಾಶ್ರಮಕ್ಕೆ ಕಳುಹಿಸುತ್ತಿದ್ದಾರೆ. ಆಧುನಿಕತೆಯ ಹೆಸರಿನಲ್ಲಿ ವಿಭಕ್ತ ಕುಟುಂಬಗಳು ಕಂಡು ಬರುತ್ತಿವೆ. ಇನ್ನೂ ವಿವಾಹ ವಿಚ್ಛೇದನಗಳಂತೂ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಾ ಸಾಗಿದೆ. ಅಂದರೆ ಬದುಕಿನಲ್ಲಿ ನೈತಿಕ ಪ್ರಜ್ಞೆಯೂ ಕುಸಿಯುತ್ತಾ "ಹಿಟ್ಲರ್ ಎಲ್ಲಿ ಬೇಕಾದರೂ ಜನಿಸಬಹುದು" ಎಂಬ ನೇಮಿಚಂದ್ರರ ಮಾತನ್ನು ನಿಜವಾಗಿಸುವತ್ತ ಸಾಗಿದೆ.

## KEYWORDS:

ಯಾದ್ ವಶೇಮ್, ಯಹೂದಿಗಳು, ಧರ್ಮ, ಯುದ್ಧ, ಬದುಕು.

**ಪೀಠಿಕೆ:**

**"ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು**
**ಹೊಸ ಯುಕ್ತಿ ಹಳೆ ತತ್ವದೊಡಗೂಡೆ ಧರ್ಮ।**
**ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ**
**ಜಸವು ಜನ ಜೀವನಕೆ" – ಮಂಕುತಿಮ್ಮ॥**

[**522ನೇ ಪದ್ಯ** ]

ಹೊಸ ಚಿಗುರು ಮತ್ತು ಹಳೆಯ ಬೇರು ಸೇರಿದರೆ ಮರದ ಚೆಲುವು ಹೆಚ್ಚುತ್ತದೆ. ಅದೇ ರೀತಿ ಹಳೆ ಸಿದ್ಧಾಂತಗಳ ಜೊತೆ ಹೊಸ ಆಲೋಚನೆಗಳು ಸೇರಿದರೆ ಜನ ಜೀವನಕ್ಕೆ ಯಶಸ್ಸು ಲಭಿಸುತ್ತದೆ. ಅದೇ ರೀತಿ ವೇದಗಳು, ಶಾಸ್ತ್ರಗಳು, ಲೋಕನೀತಿ, ಧರ್ಮಗಳೆಲ್ಲ ಕಗ್ಗತ್ತಲೆಯ ರಾತ್ರಿಯಂತಹ ಜೀವನದಲ್ಲಿ ಸರಾಗವಾಗಿ ಸಾಗಲು ಹಿಡಿದ ಪಂಜುಗಳಂತೆ. ಹೀಗಾಗಿಯೇ "ಅಹಿಂಸೋ ಪರಮ ಧರ್ಮಃ" ಎಂದು ಹೇಳಿರುವುದು. ಎಲ್ಲ ಧರ್ಮಗಳ ಬುನಾದಿಯಲ್ಲಿಯೂ ಪ್ರೀತಿ, ಕರುಣೆ, ದಯೆ, ಕ್ಷಮೆ, ಮಾನವೀಯ ಗುಣಗಳ ಬಗ್ಗೆ ತಿಳಿಸಲಾಗಿರುತ್ತದೆ. ಆದರೆ ಕಾಲಕ್ಕೆ ತಕ್ಕಂತೆ ಅಧಿಕಾರರೂಢರು ಅದನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಮಾರ್ಪಡಿಸುತ್ತಾ ಸಾಗುತ್ತಾರೆ. ಮೂಲತಃ ಧರ್ಮವು ಹೇಗೆ ಉಗಮವಾಯಿತೆಂದು ಯಾವುದೇ ಸಮರ್ಪಕವಾದ ಖಚಿತವಾದ ಆಧಾರಗಳು ಲಭ್ಯವಾಗುವುದಿಲ್ಲ. ವೇದಗಳ ಕಾಲದಲ್ಲಿಯೂ ಸಹ ಯಾವುದೇ ಧರ್ಮವನ್ನು ಸೂಚಿಸದೇ ಕೇವಲ 'ಧರ್ಮ' ಎಂದು ಹೇಳಿರುವುದನ್ನು ಕಾಣಬಹುದು.

ಧರ್ಮ ಎಂಬ ಪದವು 'ಧೃ' ಎಂಬ ಧಾತುವಿನಿಂದ ಬಂದಿದೆ. ಇದರರ್ಥ 'ಪೋಷಿಸುವುದು' 'ಉಳಿಸುವುದು', 'ರಕ್ಷಿಸುವುದು'. ಇನ್ನೂ Religion ಎಂಬ ಶಬ್ದವು ಲ್ಯಾಟಿನ್ ಭಾಷೆಯ Religio ಎಂಬ ಪದದಿಂದ ಉತ್ಪತ್ತಿಯಾಗಿದೆ. ಇದರರ್ಥ

'ಕಟ್ಟು ಬಿಗಿಗೊಳಿಸು' ಎಂಬುದಾಗಿದೆ. ಅಂದರೆ ಒಂದು ಸಮುದಾಯದ ಜನರನ್ನು ಒಗ್ಗೂಡಿಸು ಎಂದಾಗುತ್ತದೆ.

ಧರ್ಮದ ಬಗ್ಗೆ ಅನೇಕ ವ್ಯಾಖ್ಯಾನಕಾರರು ಹಲವು ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

ಮ್ಯಾಕ್ಸ್ ಮುಲ್ಲರ್:– "ಅನಂತವಾದ ದಿವ್ಯಶಕ್ತಿಯನ್ನು ಗ್ರಹಿಸಲು ಮಾನವನಿಗೆ ಸಹಾಯವಾಗುವ ಅವನ ಪ್ರವೃತ್ತಿ ಅಥವಾ ಮನಃ ಶಕ್ತಿಯೇ ಧರ್ಮ".

ಮೆಕೈವರ್ ಮತ್ತು ಪೀಜ್:–"ಧರ್ಮವು ನಾವು ಅರ್ಥ ಮಾಡಿಕೊಂಡಿರುವಂತೆ ಮನುಷ್ಯ ಮನುಷ್ಯರೊಳಗಿನ ಸಂಬಂಧ ಮಾತ್ರವಾಗಿರದೇ ಮಾನವ ಮತ್ತು ಹಲವು ಅದ್ಭುತ ಶಕ್ತಿಗಳ ನಡುವಿನ ಸಂಬಂಧವು ಆಗಿದೆ."

ಎಡ್ವರ್ಡ್ ಸಫೀರ್:– "ದೈನಂದಿನ ಜೀವನದ ಕಷ್ಟ ಕೋಟಲೆಗಳ ಹಾಗೂ ಅನೇಕ ಅಪಾಯಗಳ ಮಧ್ಯದಲ್ಲಿಯೂ ಆಧ್ಯಾತ್ಮಿಕ ಶಾಂತಿಯನ್ನು ಅರಸುವ ಮಾನವನ ಎಡೆಬಿಡದ ಪ್ರಯತ್ನವೇ ಧರ್ಮದ ಸಾರ."

ಜೈನ ಮತ್ತು ಬೌದ್ಧ ಧರ್ಮಗಳು "ಅಹಿಂಸೋ ಪರಮಧರ್ಮಃ" ಎಂದಿದ್ದಾರೆ.2

ಕುರಾನ್‌ನ ಮೊದಲ ಸಾಲು "ಪರಮ ದಯಾಮಯನೂ, ಕರುಣಾ ನಿಧಿಯೂ" ಎಂದು ಪ್ರಾರಂಭವಾದರೆ, ಭಗವದ್ಗೀತೆಯಲ್ಲಿ "ಧರ್ಮೋ ರಕ್ಷತಿ ರಕ್ಷಿತಃ" ಎಂದು ಹೇಳಿದೆ.

ಮಹಮ್ಮದ್ ಪೈಗಂಬರ್:– ದೇವರೊಬ್ಬನೆಂಬ ಸತ್ಯ, ಕೊಟ್ಟ ಮಾತನ್ನು ತಪ್ಪದಿರೆಂದು, ಬಂಧು ಬಾಂಧವರನ್ನು ನೆರೆ–ಹೊರೆಯವರನ್ನು ಕರುಣೆಯಿಂದ ನೋಡಿರೆಂದು, ವಿನಾಕಾರಣ ರಕ್ತವನ್ನು ಹರಿಸಬೇಡಿರೆಂದು.

ಇಷ್ಟೆಲ್ಲ ವಿಚಾರಗಳನ್ನು ಧರ್ಮಗಳಲ್ಲಿ ಹೇಳಿದ್ದರೂ ಸಹ ಎಲ್ಲ ಧರ್ಮಗಳ ಸಂದರ್ಭಗಳಲ್ಲಿಯೂ ಯುದ್ಧಗಳಿದ್ದವು, ಆಕ್ರಮಣಗಳಿದ್ದವು, ಸೋತವರ ಮೇಲಿನ ಅಮಾನವೀಯ ಕೃತ್ಯಗಳಿದ್ದವು. ಪರಧರ್ಮವನ್ನು ನಿರಾಕರಿಸುವ, ನಿಷೇಧಿಸುವ "ತನ್ನ ಧರ್ಮವೊಂದೇ ಪವಿತ್ರ, ತನ್ನ ದೇವರೊಬ್ಬನೆ ಸತ್ಯ" ಎಂಬ ವಿಪರೀತಗಳಿದ್ದವು. ಈ ಕಾರಣದಿಂದಲೇ ಸಾವಿರ ಸಾವಿರ ವರ್ಷಗಳಿಂದಲೂ ಯುದ್ಧಗಳು ರಕ್ತದ ಕೋಡಿಯನ್ನು ಹರಿಸಿದವು. ರಾಮಾಯಣ, ಮಹಾಭಾರತದ ಕಥೆಗಳು, ಅಶೋಕನ ಕಳಿಂಗ ಯುದ್ಧ, ಹಿಂದೂ–ಮುಸ್ಲಿಂ ಕಲಹ, ಯಹೂದಿಗಳು– ಮುಸ್ಲಿಂ ಕಲಹ, ಜರ್ಮನಿಯಲ್ಲಿ ಹಿಟ್ಲರ್ ಧರ್ಮದ ಹೆಸರಿನಲ್ಲಿ ಯಹೂದಿಗಳ ಮಾರಣಹೋಮವನ್ನು ಕಾಣಬಹುದು. ಇವೆಲ್ಲವುಗಳ ನಡುವೆ ಶಾಂತಿಯಿಂದ ಬದುಕಲು ಹವಣಿಸುವ

ಜನರನ್ನು ನಾವು ಕಾಣಬಹುದು.

**"ನೂರಾರು ಮತವಿಹುದು ಲೋಕದುಗ್ರಾಣದಲಿ**
**ಆರಿಸಿಕೊ ನಿನ್ನ ರುಚಿಗೊಪ್ಪುವುದನರೊಳ್**
**ಸಾರದಡುಗೆಯನೊಳ್ ವಿಚಾರ ದೊಲೆಯಲಿ ಮಾಡು**
**ಬೇರೆ ಮತಿ, ಬೇರೆ ಮತ" – ಮಂಕುತಿಮ್ಮ**

(934ನೇ ಪದ್ಯ )

ಈ ಮೇಲಿನ ಮಾತುಗಳನ್ನು ನೆನಪಿಸುವಂತೆ 2007ರಲ್ಲಿ ಪ್ರಕಟವಾದ ನೇಮಿಚಂದ್ರರ "ಯಾದ್-ವಶೇಮ್" ಎಂಬ ಕಾದಂಬರಿಯು ಯುದ್ಧ, ಯುದ್ಧದ ಭೀಕರತೆ, ಸಾವು, ನೋವು, ಶಾಂತಿ, ಬದುಕು, ಧರ್ಮ ಹೀಗೆ ಹಲವು ವಿಚಾರಗಳ ಸಾರಯುತ ಮಿಶ್ರಣವಾಗಿದೆ.

**ಯುದ್ಧ ಮತ್ತು ಮಾನವ:**

"ದಯೆಯೇ ಧರ್ಮದ ಮೂಲವಯ್ಯಾ" ಎಂದು ಎಲ್ಲ ಧರ್ಮಗಳು ಸಾರಿದ್ದರೂ ಸಹ ಯಾವುದೇ ಧರ್ಮವು ಯುದ್ಧವನ್ನು ನಿರಾಕರಿಸಲಿಲ್ಲ. ನಮ್ಮ ಭಗವದ್ಗೀತೆಯಲ್ಲಿಯೂ ಸಹ ಧರ್ಮ ಸಂಸ್ಥಾಪನೆಗೆ ಯುದ್ಧದ ಅವಶ್ಯಕತೆಯಿದೆ ಎಂದು ಕೃಷ್ಣನೇ ಸ್ವತಃ ಹೇಳುತ್ತಾನೆ. ಯಹೂದಿಗಳ ಪವಿತ್ರ ಗ್ರಂಥವು ಸಹ ದೇವರು ನಿರಾಕಾರ, ಅವನನ್ನು ಪ್ರಾರ್ಥಿಸಬೇಕು, ಹಿಂಸೆಯನ್ನು ಮಾಡಬಾರದೆಂದು ಹೇಳುತ್ತದೆ. ಮುಸ್ಲಿಂ ಮತ್ತು ಕ್ರೈಸ್ತ ಧರ್ಮವು ಸಹ ತಮ್ಮ ಪವಿತ್ರ ಗ್ರಂಥಗಳಾದ ಕುರಾನ್ ಮತ್ತು ಬೈಬಲ್‌ಗಳಲ್ಲಿಯೂ ಅದನ್ನೇ ಹೇಳಿದೆ. ಆದರೆ ಅದನ್ನು ಕಾಲಕ್ಕೆ ತಕ್ಕಂತೆ ಬದಲಿಸಿ ಅವರ ಹೇಳಿಕೆಗಳನ್ನೇ ವಿಭಿನ್ನ ರೂಪಗಳಲ್ಲಿ ಅರ್ಥೈಸಲಾಗುತ್ತಿದೆ. ಈ ಕಾರಣದಿಂದಲೇ ಹಿಟ್ಲರ್ ಜರ್ಮನಿಯಲ್ಲಿ ಅಧಿಕಾರವನ್ನು ವಹಿಸಿಕೊಂಡು ಉತ್ತಮ ಸಮಾಜದ ನಿರ್ಮಾಣಕ್ಕಾಗಿ ಯಹೂದಿಗಳನ್ನು ನಿರ್ನಾಮ ಮಾಡಬೇಕೆಂದು ನಿಶ್ಚಯಿಸಿ ಅದಕ್ಕೆ ಬೇಕಾದ ಕ್ರಮಗಳನ್ನು ಕೈಗೊಳ್ಳುತ್ತಾನೆ. ಯಹೂದಿಗಳನ್ನು ಕೆಲಸದಿಂದ ತೆಗೆದುಹಾಕುತ್ತಾನೆ. ಅವರು ಅಗತ್ಯ ಸಾಮಾಗ್ರಿಗಳನ್ನು ಕೊಳ್ಳಲು ಸಮಯ ನಿಗದಿಪಡಿಸುತ್ತಾನೆ. ಆ ಸಮಯದ ನಂತರದಲ್ಲಿ ಯಹೂದಿಗಳು ರಸ್ತೆಯಲ್ಲಿ ಕಂಡರೆ ಅವರನ್ನು ಕಂಡಲ್ಲಿ ಗುಂಡಿಟ್ಟು ಕೊಲ್ಲಲು ಆದೇಶಿಸುತ್ತಾನೆ. ಯಹೂದಿಗಳನ್ನು ಸೆರೆ ಹಿಡಿದು ಗುಲಾಮರಂತೆ ದುಡಿಸಿಕೊಳ್ಳುತ್ತಾನೆ. ಸೆರೆಯಾಳುಗಳ ಮೇಲೆ ಮುದ್ರೆಯನ್ನು ಒತ್ತಿ ಅವರಿಗೆ ದಿನಕ್ಕೆ ಒಂದೊತ್ತು ಊಟ ಹಾಕಲು ಆದೇಶಿಸುತ್ತಾನೆ. ಕೊಟ್ಟಿಗೆಯಲ್ಲಿ ಪ್ರಾಣಿಗಳನ್ನು ತುಂಬುವಂತೆ ಒಂದು ಕೋಣೆಯಲ್ಲಿಯೇ ನೂರಾರು ಯಹೂದಿಗಳನ್ನು ಕೂಡಿ ಹಾಕುತ್ತಾರೆ. ಒಂದು ತಟ್ಟೆ, ಒಂದು ಲೋಟ, ಮುಖ ತೊಳೆಯಲು ಸಮಯ ನಿಗದಿ ಪಡಿಸಿರುತ್ತಾರೆ. ನಂತರದಲ್ಲಿ ದುಡಿಮೆ. ಈ ಮಧ್ಯೆ ಅವರು ದುಡಿಯಲು ಅಶಕ್ತರಾದರೆ ಅವರನ್ನು ಸಾಯಿಸುತ್ತಾರೆ (ಹ್ಯಾನಾಳ ಅಮ್ಮನನ್ನು, ತಮ್ಮನನ್ನು ಇದೇ

ರೀತಿ ಸಾಯಿಸುತ್ತಾರೆ). ಗುಂಡಗಿದ್ದ ಹೆಣ್ಣು ಮಕ್ಕಳನ್ನು ಅಲ್ಲಿನ ಸೈನಿಕರು ತಮ್ಮ ಕಾಮ ತೃಪ್ತಿಗಾಗಿ ಬಳಸಿಕೊಳ್ಳುತ್ತಾರೆ (ಹ್ಯಾನಾಳ ಅಕ್ಕ ರೆಬೆಕ್ಕಾ ಈ ರೀತಿಯ ಅತ್ಯಾಚಾರಕ್ಕೆ ಒಳಗಾಗಿರುತ್ತಾಳೆ). ಅನೇಕ ವಿಜ್ಞಾನದ ಪ್ರಯೋಗಗಳಿಗೆ ಅವರನ್ನು ಬಲಿಪಶುಗಳನ್ನಾಗಿ ಮಾಡುತ್ತಾರೆ.

ಹಿಟ್ಲರ್ ಅಧಿಕಾರಕ್ಕೆ ಬರುವ ಮೊದಲು ಜರ್ಮನಿ ಜನರು ಯಹೂದಿಗಳನ್ನು ಸೇರಿದಂತೆ ಅಣ್ಣ ತಮ್ಮಂದಿರಂತೆ ಸೌಹಾರ್ದಯುತವಾಗಿ ಬಾಳುತ್ತಿದ್ದರು. ಜರ್ಮನಿಯ ಜನಗಳಿಗೂ ಹಿಟ್ಲರ್‌ನ ಈ ಆದೇಶ ಸಂಪೂರ್ಣ ಸಮ್ಮತವಿರಲಿಲ್ಲ. ಆದರೆ ಸರ್ಕಾರದ ಆದೇಶ ಪಾಲನೆಗಾಗಿ, ತಪ್ಪಿದರೆ ಶಿಕ್ಷೆಯ ಭಯದಿಂದ ಅದನ್ನು ಪಾಲಿಸುತ್ತಿದ್ದರು. ಆದರೆ ಯಹೂದಿಗಳ ಮೇಲಿನ ದೌರ್ಜನ್ಯವನ್ನು ಪ್ರಶ್ನಿಸುವ ಧೈರ್ಯ ಯಾರಿಗೂ ಇರುವುದಿಲ್ಲ. ಇದಕ್ಕೆ ಮತ್ತೊಂದು ಕಾರಣವೇನೆಂದರೆ ಯಹೂದಿಗಳು ಗುಲಾಮರಾದರೆ, ದೇಶಭ್ರಷ್ಟರಾದರೆ ಅವರ ಆಸ್ತಿಗಳು, ವಸ್ತುಗಳು ಬಹಳ ಕಡಿಮೆ ಬೆಲೆಯಲ್ಲಿ ಸ್ಥಳೀಯರಿಗೆ ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿತ್ತು. ಹಾಗಾಗಿ ಯಾರು ಅದನ್ನು ಪ್ರತಿಭಟಿಸಲಿಲ್ಲ. ಇದಕ್ಕೆ ಸಂಬಂಧಿಸಿದಂತೆ ನಮ್ಮಲ್ಲಿ ಪ್ರಸಿದ್ಧವಾದ ಒಂದು ಮಾತಿದೆ: ''ನೆರೆಮನೆ ಖಾಲಿಯಾದರೆ ಕರು ಕಟ್ಟಲು ತಾವಾಯಿತು'' ಎಂಬಂತೆ.

ಸಾವಿರಾರು ಯಹೂದಿಗಳು ಜೀವ ಉಳಿಸಿಕೊಳ್ಳಲು ಬೇರೆ ದೇಶಗಳಿಗೆ ವಲಸೆ ಹೋಗಲು ಬಯಸಿದರು. ಆದರೆ ಬೇರೆ ದೇಶದ ಅವರ ಸಂಬಂಧಿಕರು ಇವರಿಗೆ ಫ್ರಾಂಚೈಸಿಯನ್ನು ನೀಡಬೇಕಾಗಿತ್ತು. ಇದರಿಂದಾಗಿ ಎಲ್ಲ ಯಹೂದಿಗಳಿಗೆ ಜರ್ಮನಿಯಿಂದ ಬೇರೆಡೆಗೆ ವಲಸೆ ಹೋಗಲು ಸಾಧ್ಯವಾಗಲಿಲ್ಲ. ಇದರಿಂದಾಗಿ ಆರು ಮಿಲಿಯನ್‌ಗೂ ಮೀರಿದ ಯಹೂದಿಗಳ ಮಾರಣಹೋಮ ನಡೆಯಿತು. ಇದಕ್ಕೆ ಸಂಬಂಧಿಸಿದಂತೆ ನೇಮಿಚಂದ್ರರು ಕಾದಂಬರಿಯ ಪ್ರಾರಂಭದಲ್ಲಿ ಈ ಕಾದಂಬರಿಗೆ 'ನೂರು ಸಾವಿರ ಸಾವಿನ ನೆನಪು' ಎಂದು ಕರೆದು ನಂತರದಲ್ಲಿ ಗೋಳಿನ ಗೋಡೆಯ ಹೆಸರಾದ 'ಯಾದ್ ವಶೇಮ್' ಎಂದು ಹೆಸರಿಡುತ್ತಾರೆ. ಯುದ್ಧದ ಭೀಕರತೆಗೆ ಸಂಬಂಧಿಸಿದಂತೆ ನಮ್ಮ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದಲ್ಲಿ ನಮ್ಮ ಕವಿಗಳು ಶಕ್ತಿಯುತವಾಗಿ ಕಟ್ಟಿಕೊಟ್ಟಿದ್ದಾರೆ. ರನ್ನನ ಗದಾಯುದ್ಧದ ಒಂದು ಪ್ರಸಂಗದಲ್ಲಿ ದುರ್ಯೋಧನನು ರಣರಂಗದಲ್ಲಿ ಕರ್ಣನ ಶವವನ್ನು ಹುಡುಕುವ ಸಂದರ್ಭದಲ್ಲಿ ರಣರಂಗದ ಭೀಕರತೆಯನ್ನು ವರ್ಣಿಸುತ್ತಾರೆ. ಇನ್ನೂ ಕುವೆಂಪುರವರ ''ಸ್ಮಶಾನ ಕುರುಕ್ಷೇತ್ರ'' ನಾಟಕದಲ್ಲಿ ಒಂದು ದೃಶ್ಯದಲ್ಲಿ ವೃದ್ಧೆ ಹಾಗೂ ಮಹಿಳೆಯರ ಸಂಭಾಷಣೆಯನ್ನು ಗಮನಿಸಬಹುದು.

ಮುದುಕಿ: ನಿನ್ನ ಪತಿ ಆರ ಕಡೆಯವನ್?

ಮಾತೆ: ಪಾಂಡವರ ಪಕ್ಷದವನ್... ನಿನ್ನ ಪುತ್ರನ್?

ಮುದುಕಿ: ಕೌರವನವನ್.

ಮಾತೆ: ನಿನ್ನ ಮಗನೆನ್ನ ಪತಿಗೆ ಪಗೆಯಾಗಿದ್ದನೇನ್?

ಮುದುಕಿ: ಆರಿಗಾರು ಪಗೆ? ನಿನಗಾನ್ ಪಗೆಯೇ?

ಮಾತೆ: ಉಂಟೇ?

ಮುದುಕಿ: ನಮ್ಮವೋಲಿಹ ಬಡಜನಂಗಳೆಲ್ಲ ಮಂಕುಗಳಮ್ಮಾ. ಪಾಂಡವರ್ ಕೌರವರ್ ನೆಲಕೆ ಪೊಯ್ದಾಡಿದರೆ ನಮ್ಮ ಮಕ್ಕಳ್ ಅವರಿವರಂ ಕೆಳೆಗೊಂಡು ನಿಂತು ಹೆಮ್ಮೆಗೆ ಬಡಿದಾಡಿ ಮಡಿಯುವರ್.. ನನ್ನ ಮಗುವಿಗೆ ನಿನ್ನಾತನ ಮೇಲೆ ಪಗೆಯೇನ್? ... ನಾವಿರ್ವರುಂ ದುಃಖಾರ್ತರಮ್ಮಾ! ಬಾ ಹುಡುಕಿ ನೋಡುವಂ4.

ಇಬ್ಬರೂ ಉಭಯ ಕುಶಲೋಪರಿಯ ನಂತರ ತಮ್ಮವರ ಹುಡುಕಾಟದಲ್ಲಿ ತೊಡಗುತ್ತಾರೆ. ಆಗ ಅವರಿಗೆ ಇಬ್ಬರು ಸೈನಿಕರು ಪರಸ್ಪರ ಕತ್ತಿಯಿಂದ ತಿವಿದುಕೊಂಡು ಸತ್ತಿರುವುದನ್ನು ಕಾಣುತ್ತದೆ. ಆಗ ವೃದ್ಧೆ ಮಹಿಳೆಗೆ ನಿನ್ನ ಗಂಡ ನನ್ನ ಮಗನನ್ನು ಕೊಂದಿದ್ದಾನೆ ಎನ್ನುತ್ತಾಳೆ. ಆಗ ಮಹಿಳೆ ವೃದ್ಧೆಗೆ ನಿನ್ನ ಮಗ ನನ್ನ ಪತಿಯನ್ನು ಕೊಂದಿದ್ದಾನೆ ಎನ್ನುತ್ತಾಳೆ. 'ಆಗ ಇಬ್ಬರು ಪರಸ್ಪರ ಗೋಳಾಡುತ್ತಾ ಕೌರವರು ಮತ್ತು ಪಾಂಡವರು ತಮ್ಮ ವೈಯಕ್ತಿಕ ದ್ವೇಷಕ್ಕಾಗಿ ನಮ್ಮೆಲ್ಲರ ದುಃಖಕ್ಕೆ ಕಾರಣರಾದರು ಎನ್ನುತ್ತಾರೆ'. ಅದು ಸತ್ಯವೇ ಆಗಿದೆ. ಯುದ್ಧಗಳು ಸಾವಿರಾರು ಪ್ರಾಣಿಗಳು ಹಾಗೂ ಲಕ್ಷಾಂತರ ಜನರ ಪ್ರಾಣಕ್ಕೆ ಹಾನಿಯಾಗುತ್ತದೆ. ಸಾವಿರಾರು ಜನರು ಅಂಗವಿಕಲರಾಗುತ್ತಾರೆ. ಮಹಿಳೆಯರು ತಮ್ಮ-ತಮ್ಮ ಗಂಡಂದಿರನ್ನು, ಮಕ್ಕಳನ್ನು, ಅಳಿಯಂದಿರನ್ನು ಕಳೆದುಕೊಂಡು ಅತಂತ್ರರಾಗುತ್ತಾರೆ. ಅನೇಕ ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗುತ್ತಾರೆ, ಊರುಗಳು ಗೆದ್ದವರ ಸುಲಿಗೆಗೆ ತುತ್ತಾಗುತ್ತದೆ. ಆಸ್ತಿ-ಪಾಸ್ತಿ ಹಾನಿಯಾಗುತ್ತದೆ. ಈ ಕಾರಣಗಳಿಂದಲೇ ಎರಡು ಮಹಾಯುದ್ಧಗಳ ಭೀಕರತೆಯನ್ನು ಕಂಡಿದ್ದ ಕುವೆಂಪುರವರು ತಮ್ಮ "ರಾಮಾಯಣದರ್ಶನಂ" ಕೃತಿಯಲ್ಲಿ ಯುದ್ಧ ವಿರೋಧಿ ನೀತಿಯನ್ನು ನಿರೂಪಿಸಿದ್ದಾರೆ. ಯುದ್ಧದಿಂದ ವಿನಾಶವೇ ಹೊರತು ಅಭಿವೃದ್ಧಿಯಲ್ಲ ಎಂದಿದ್ದಾರೆ. ಪ್ರಸ್ತುತ ಜಗತ್ತು ತಾಂತ್ರಿಕ ಯುಗವಾಗಿದ್ದು ಕೇವಲ ಒಂದು ಅಣುಬಾಂಬ್ ಹಾಕುವ ಮೂಲಕ ರಾಷ್ಟ್ರ ರಾಷ್ಟ್ರಗಳನ್ನು ನಾಶಗೊಳಿಸುವ ಶಕ್ತಿ ಎಲ್ಲ ರಾಷ್ಟ್ರಗಳಿಗಿವೆ.

**ಶಾಂತಿ ಮತ್ತು ಮಾನವ:**

**"ದೇವ ದಾನವರ ರಣರಂಗ ಮಾನವ ಹೃದಯ**
**ಭಾವರಾಗ ಹಠಂಗಳವರ ಸೇನೆಗಳು**
**ಭೂಮಿ ಭವಜಯಗಳ ಭ್ರಾಂತಿಯಲಿ ಮರೆಯುವರು**

ಜೀವಾ ಮೃತನವರು– ಮಂಕುತಿಮ್ಮ"

(ಪದ್ಯ– 192)

ಮನುಷ್ಯನ ಹೃದಯದಲ್ಲಿ ದೇವತೆಗಳಿಗೂ ರಾಕ್ಷಸರಿಗೂ ಎಂದರೆ ಒಳ್ಳೆಯದಕ್ಕೂ ಮತ್ತು ಕೆಟ್ಟದ್ದಕ್ಕೂ ಜಗಳ/ಯುದ್ಧ ನಡೆಯುತ್ತಿರುತ್ತದೆ. ಭಾವ, ರಾಗ, ಹಠಗಳೇ ಅವನ ಸೈನ್ಯಗಳು, ವಿಜಯದ ಭ್ರಾಂತಿಯಲ್ಲಿ ಜೀವದ ಅಮೃತದ ಸಾರವನ್ನು ಅವರು ಮರೆಯುತ್ತಾರೆ.

ಭೂಮಿಯ ಮೇಲೆ ಬದುಕಲು ಯುದ್ಧಗಳು ಬೇಕಿಲ್ಲ, ಪ್ರೀತಿ, ನಂಬಿಕೆ, ಪರಸ್ಪರ ಸಹಕಾರ ಬೇಕು ಎಂಬುದನ್ನು ನೇಮಿಚಂದ್ರ ಅವರು ಕಾದಂಬರಿಯ ಉದ್ದಕ್ಕೂ ಸಾಕ್ಷೀಕರಿಸುತ್ತಾ ಸಾಗುತ್ತಾರೆ. ಧರ್ಮದ ಹೆಸರಿನಲ್ಲಿ ಹಿಟ್ಲರ ನಡೆಸುವ ಕಾರ್ಯದಿಂದ ಬೇಸತ್ತ ಜನ, ಬದುಕು ಕಳೆದುಕೊಂಡ ಜನ ಶಾಂತಿ ಸ್ಥಾಪನೆಗಾಗಿ ಹಂಬಲಿಸುತ್ತಾರೆ.

ಹ್ಯಾನಾ ಜೀವವನ್ನು ಉಳಿಸಿಕೊಂಡು ಭಾರತಕ್ಕೆ ಬಂದರೂ ಸಹ ಅಲ್ಲಿ ಅವಳು ಶಾಂತಿ ನೆಮ್ಮದಿಯಿಂದ ಬದುಕಲು ಸಾಧ್ಯವಾಗಲೇ ಇಲ್ಲ. ಕಾರಣ ಅವಳಿಗೆ ಹಿಟ್ಲರನ ಕ್ರೌರ್ಯ, ದೂರಾದ ಅಮ್ಮ, ತಮ್ಮ, ಅಕ್ಕನದೇ ನೆನಪು. ತನ್ನ ಧರ್ಮವನ್ನು ಮರೆಯಲಾಗದೆ ಇತರ ಧರ್ಮವನ್ನು ಸ್ವೀಕರಿಸಲಾಗದೆ ಒದ್ದಾಡುತ್ತಾಳೆ. ಅದಕ್ಕಾಗಿ ಅವಳು ವಿಶ್ವದ ಎಲ್ಲ ಧರ್ಮಗಳ ಧಾರ್ಮಿಕ ಗ್ರಂಥಗಳನ್ನು ಓದುತ್ತಾಳೆ. ಎಲ್ಲಿಯೂ ಸಹ ಧರ್ಮದ ಹೆಸರಿನಲ್ಲಿ ಜನರನ್ನು ಶೋಷಿಸಬೇಕೆಂದು ಇರುವುದಿಲ್ಲ. ಎಲ್ಲ ಗ್ರಂಥಗಳಲ್ಲಿಯೂ ಪ್ರೀತಿ, ಕರುಣೆ, ದಯೆ ಮತ್ತು ಮಾನವೀಯ ಗುಣಗಳನ್ನೇ ಅವು ಬೆಂಬಲಿಸಿರುತ್ತವೆ. ಆದರೆ ಧರ್ಮದ ಹೆಸರಿನಲ್ಲಿ ದ್ವೇಷವನ್ನು ಸಾಧಿಸಿ ಜನಸಾಮಾನ್ಯರ ಬದುಕನ್ನು ಛಿದ್ರಗೊಳ್ಳುತ್ತಿದೆ. ಇದರಿಂದ ಯಾರಿಗೂ ಸುಖವಿಲ್ಲ, ಶಾಂತಿಯಿಲ್ಲ, ನಾಳೆಗಳ ಭರವಸೆ ಇಲ್ಲ. ಹಿಟ್ಲರ್ ಜರ್ಮನಿಯಲ್ಲಿ ಯಹೂದಿಗಳ ಮೇಲೆ ನಡೆಸಿದ ಮಾರಣ ಹೋಮವನ್ನು, ಯಹೂದಿಗಳು ಇಸ್ರೇಲ್‌ನಲ್ಲಿ ಮುಸ್ಲಿಂರ ಮೇಲೆ ನಡೆಸುತ್ತಿದ್ದಾರೆ. ಹಾಗಾದರೆ ಇತಿಹಾಸದ ತಪ್ಪುಗಳು ಮತ್ತೊಮ್ಮೆ ಪುನರಾವರ್ತಿಸುತ್ತಿವೆ. 'ಅಂದು ಹೊತ್ತಿ ಉರಿದಿತ್ತು ಜರ್ಮನಿ, ನಿಂತು ನೋಡಿತ್ತು ಜಗತ್ತು. ಇಂದು ಹಿಟ್ಲರ್ ಎಲ್ಲಿ ಬೇಕಾದರೂ ಹುಟ್ಟಬಲ್ಲ, ಅಮೆರಿಕಾದಲ್ಲಿ, ಜರ್ಮನಿಯಲ್ಲಿ, ಇಸ್ರೇಲಿನಲ್ಲಿ, 'ಅಹಿಂಸೆಯೇ ಪರಮಧರ್ಮ' ಎಂದು ಸಾರಿದ ಭಾರತದಲ್ಲೂ ಕೂಡ "ನಮ್ಮ ನಡುವ ಎಲ್ಲೂ ಕೂಡ ಹುಟ್ಟಿ ಬಿಡಬಲ್ಲ ನಮ್ಮೊಳಗೆ ಜನಿಸಿ ಬಿಡಬಲ್ಲ ಹಿಟ್ಲರ್‌ನನ್ನು ತಡೆಹಿಡಿದ ಹೊಣೆ ನಮ್ಮದು'

'ಜಾತಿ ಇಲ್ಲದ, ಭೀತಿ ಇಲ್ಲದ ನಾಡ ಕರುಣಿಸು ಭಗವಂತ, ನೊಂದ ಈ ನೆಲಕ್ಕೆ ಶಾಂತಿ ನೀಡು' ಎಂಬ ವಿಚಾರವನ್ನು ಹ್ಯಾನಾಳಿಂದ ಲೇಖಕಿ ಹೊರಹೊಮ್ಮಿಸಿದ್ದಾರೆ. ಇದೇ ಶಾಂತಿ ಮಂತ್ರವನ್ನ ನಮ್ಮ ಪುರಾಣದ ಕತೆಗಳು,

ಧರ್ಮಗಳು, ಧರ್ಮಗ್ರಂಥಗಳು.

**ಬದುಕು ಮತ್ತು ಮಾನವ:**

ಪ್ರಪಂಚದಲ್ಲಿ ಎಲ್ಲಕ್ಕಿಂತ ಮುಖ್ಯವಾದುದು, ದೊಡ್ಡದಾದುದು ಬದುಕು. ನಾವು ಬದುಕಲು ಯಾರನ್ನು ಬೇಕಾದರೂ ಮೋಸ ಮಾಡುತ್ತೇವೆ, ಹಿಂಸಿಸುತ್ತೇವೆ. ಉದಾ:- ಹಿಟ್ಲರ್ ಯಹೂದಿಗಳನ್ನು ಹಿಂಸಿಸಿ, ಶೋಷಣೆಗೆ ಒಳಪಡಿಸಿದಾಗ ಜರ್ಮನಿಯ ನಾಗರೀಕರು ನಮಗೆ ಕಡಿಮೆ ದರದಲ್ಲಿ ವಸ್ತುಗಳು ಮಾರುಕಟ್ಟೆಯಲ್ಲಿ ಲಭ್ಯವಾಗುತ್ತೆಂದು ಆಶಿಸಿದರು. ಹೇಗೆ ಗಿಡವು ಎಷ್ಟು ಬಾರಿ ಕತ್ತರಿಸಿದರೂ ಮತ್ತೆ ಮತ್ತೆ ಚಿಗುರೊಡೆಯುವಂತೆ, ಮರಣಶಯ್ಯೆಯಲ್ಲಿ ಇರುವವರು ಸಹ ಬದುಕಲು ಹವಣಿಸುತ್ತಾರೆ. ಪ್ರಸ್ತುತ ಕಾದಂಬರಿಯಲ್ಲಿಯೂ ಸಹ ನೇಮಿಚಂದ್ರ ಅವರು ಹ್ಯಾನಾ, ರೆಬೆಕ್ಕಾ, ಗುಂಡಮ್ಮರ ಮೂಲಕ ವಿವಿಧ ಆಯಾಮದ ಬದುಕಿನ ಚಿತ್ರಣವನ್ನು ನೀಡುತ್ತಾರೆ.

ಹಿಟ್ಲರ್‌ನ ಕಪಿಮುಷ್ಠಿಯಿಂದ ತಪ್ಪಿಸಿಕೊಂಡ ಹ್ಯಾನಾ ಗುಂಡಮ್ಮನಂತಹ ತಾಯಿಯ ಮಡಿಲಿನಲ್ಲಿ ಅನಿತಾಳಾಗಿ ಸುಂದರ ಬದುಕನ್ನು ಕಟ್ಟಿಕೊಂಡರೆ, ಹ್ಯಾನಾಳ ಅಕ್ಕ ರೆಬೆಕ್ಕಾ ಸೆರೆಯಾಳಾಗಿ ಸಿಕ್ಕಿಹಾಕಿಕೊಳ್ಳಲು ಬಟ್ಟೆಯಿಲ್ಲದೆ, ಒಪ್ಪತ್ತು ಊಟವಿಲ್ಲದೆ, ಮೈ ಮುರಿಯುವಷ್ಟು ದುಡಿಮೆ, ಯಾಮಾರಿದರೆ ಮೈ ಮೂಳೆ ಮುರಿಯುವಂತೆ ಹೊಡೆತ ಹಾಗೂ ಸೈನಿಕರ ನಿರಂತರ ಅತ್ಯಾಚಾರಕ್ಕೆ ಒಳಗಾದರೂ ಸಹ ಅವಳಲ್ಲಿ ಬದುಕುವ ಹಂಬಲವಿತ್ತು. ಒಂದು ತುಂಡು ಬ್ರೆಡ್‌ಗಾಗಿ ಆತ್ಮಸಾಕ್ಷಿಯನ್ನು ಮರೆತಳು. ಆದರೂ ಸಹ ಒಂದಲ್ಲ ಒಂದು ದಿನ ನಾನು ಇಲ್ಲಿಂದ ಬಿಡುಗಡೆಯಾಗಿ ಹೊರ ಜಗತ್ತಿಗೆ ತೆರಳಿ ಬದುಕನ್ನು ಕಟ್ಟಿಕೊಳ್ಳುತ್ತೇನೆ ಎಂಬ ನಂಬಿಕೆಯಿಂದ ಎಲ್ಲವನ್ನು ಸಹಿಸಿಕೊಳ್ಳುತ್ತಾಳೆ. ಆದರೆ ಬಲಹೀನರಾದ ರೆಬೆಕ್ಕಾಳ ತಾಯಿ ಮತ್ತು ತಮ್ಮ ಅವರ ಕಣ್ಣೆದುರೆ ಸುಟ್ಟು ಹೋಗುತ್ತಾರೆ. ಮುಂದೆ ಅಲ್ಲಿಂದ ತಪ್ಪಿಸಿಕೊಂಡು ಇಸ್ರೇಲ್‌ನಲ್ಲಿ ಬದುಕನ್ನು ಕಟ್ಟಿಕೊಳ್ಳುತ್ತಾಳೆ. ಧರ್ಮದ ಹೆಸರಿನಲ್ಲಿ ತಾನು ಅನುಭವಿಸಿದ ನರಕಯಾತನೆಯನ್ನು ಮರೆತು ಪ್ಯಾಲೆಸ್ತಿನ್ ಯಹೂದಿಗಳಿಗೆ ಸೇರಬೇಕೆಂದು ಪ್ಯಾಲೆಸ್ತಿನ್‌ನಲ್ಲಿ ಮುಸ್ಲಿಂರ ಬಹಿಷ್ಕಾರವನ್ನು ಬೆಂಬಲಿಸುತ್ತಾಳೆ. ಮುಂದೆ ಇದೇ ಮುಸ್ಲಿಂರ ಮಾನವ ಬಾಂಬ್ ದಾಳಿಗೆ ರೆಬೆಕ್ಕಾಳ ಮೊಮ್ಮಗಳು ಬಲಿಯಾಗುತ್ತಾಳೆ.

ಇನ್ನೂ ಹ್ಯಾನಾ ಅನಿತಾಳಾಗಿ ಬದುಕನ್ನು ಕಟ್ಟಿಕೊಂಡರೂ ಸಹ ಅವಳಿಗೆ ತನ್ನ ಕಳೆದು ಹೋದ ತನ್ನ ಕುಟುಂಬದ ನೆನಪು, ಅವರನ್ನು ಸೇರುವ ಬಯಕೆ, ಹಿಟ್ಲರ್‌ನ ಕಾರ್ಯ, ಧರ್ಮ ಸಂಘರ್ಷ ಇವುಗಳ ತೊಳಲಾಟದಲ್ಲಿಯೇ ಮಾನಸಿಕವಾಗಿ ಜರ್ಝರಿತಳಾಗುತ್ತಾಳೆ. ಕಾದಂಬರಿಯ ಕೊನೆಯಲ್ಲಿ ಭವಿಷ್ಯದ ಭರವಸೆಗಳನ್ನು ನೀಡುವ ಬದುಕು ಬೇಕೆಂದು ಬಯಸುತ್ತಾಳೆ. ಇಲ್ಲಿ ಬರುವ ಮತ್ತೊಂದು ವಿಶೇಷ

ಪಾತ್ರವೆಂದರೆ "ಗುಂಡಮ್ಮ". ಈಕೆ ಅನಕ್ಷರಸ್ಥ ಗ್ರಾಮೀಣ ಮಹಿಳೆಯಾಗಿದ್ದರೂ ಕಾಲಕ್ಕೆ ತಕ್ಕಂತೆ ವಿವೇಕಯುತವಾಗಿ ಯೋಚಿಸುವ ಧೀಮಂತ ಪಾತ್ರವಾಗಿ ಕಂಡು ಬರುತ್ತಾಳೆ. ತನ್ನ ಹೆಣ್ಣು ಮಕ್ಕಳಂತೆ ಹ್ಯಾನಾಳನ್ನು ಕಾಣುವ ಗುಂಡಮ್ಮನವರು ಹ್ಯಾನಾ ದೊಡ್ಡವಳಾದಾಗ ಅವಳನ್ನು ಆರೈಕೆ ಮಾಡುವ ರೀತಿ, ಧರ್ಮದ ಬಗ್ಗೆ, ದೇವರ ಬಗ್ಗೆ ಅವರಿಗಿದ್ದ ನಿಲುವು ಮೆಚ್ಚತಕ್ಕದ್ದು. ಒಮ್ಮೆ ಹ್ಯಾನಾ 'ಕುರುಕ್ಷೇತ್ರ ಯುದ್ಧದಲ್ಲಿ ಗೆದ್ದವರು ಯಾರು?' ಎಂದು ಕೇಳಿದಾಗ ಗುಂಡಮ್ಮನವರು ಹೀಗೆ ಹೇಳುತ್ತಾರೆ: 'ಯುದ್ಧದಲ್ಲಿ ಯಾರಾದ್ರೂ ಗೆದ್ದೋರುಂಟಾ ಮಗಾ? ಪಾಂಡವರು ಏನಾದ್ರು ಗೆದ್ರು.. ವಿಧವೆರೂ, ಅನಾಥ್ ಮಕ್ಳೂ ತುಂಬಿ ಹೋದ ರಾಜ್ಯದಾಗ, ತಮ್ಮೆಲ್ಲಾ ನೆಂಟ್ರು ಇಷ್ಟ್ರು ಮಕ್ಳನ್ನೂ ಕಳಕೊಂಡು ಯಾವ ಸುಖ ಸುಖಕೊಂಡ್ರು..? ಯುದ್ಧದಲ್ಲಿ ಗೆದ್ದವರಿಲ್ಲ.' ಎನ್ನುತ್ತಾರೆ. ಮುಂದೆ ಹ್ಯಾನಾಳ ತಂದೆ ತೀರಿಕೊಂಡಾಗ ಅನಾಥಳಾದ ಹ್ಯಾನಾಳನ್ನು ತನ್ನ ಮಕ್ಕಳ ಜೊತೆಗೆ ಹ್ಯಾನಾಳು ಒಬ್ಬಳು ಎಂದು ಭಾವಿಸಿ ಮನೆ ತುಂಬಿಸಿಕೊಳ್ಳುತ್ತಾರೆ. ಗುಂಡಮ್ಮ ಹ್ಯಾನಾಳ ಬಳಿ ಬಂದು ನಿನ್ನ ದೇವರ ಪಟವಿದ್ದರೆ ಅದನ್ನು ತಂದು ದೇವರ ಮನೆಯಲ್ಲಿ ಇಡು ನಮ್ಮ ದೇವರ ಜೊತೆಯಲ್ಲಿ ನಿಮ್ಮ ದೇವರಿಗೂ ಪೂಜೆಯಾಗಲಿ ಎನ್ನುತ್ತಾರೆ.

ಪ್ರತಿ ಯುಗಾದಿಯ ದಿನ ಗುಂಡಮ್ಮನವರು ತಮ್ಮ ತಂದೆಯ ಸಮಾಧಿ ಪೂಜೆ ಮಾಡಿದಾಗಲೆಲ್ಲಾ ಹ್ಯಾನಾಳ ತಂದೆಯ ಸಮಾಧಿಗೂ ಹ್ಯಾನಾಳಿಂದ ಪೂಜೆಯನ್ನು ಮಾಡಿಸುತ್ತಾರೆ. ಮುಂದೆ ಹ್ಯಾನಾಳನ್ನು ಅನಿತಾ ಎಂದು ಕರೆದು ತನ್ನ ಮಗನಿಗೆ ಮದುವೆ ಮಾಡಿಸುತ್ತಾರೆ. ಹೀಗೆ ಬದುಕಿನಲ್ಲಿ ಪ್ರೀತಿ, ಕರುಣೆ, ಮಾನವೀಯತೆಯ ಮೂರ್ತಿಯಾಗಿ ಗುಂಡಮ್ಮ ಕಂಡು ಬರುತ್ತಾರೆ. ಹೀಗಾಗಿ ನೇಮಿಚಂದ್ರರು ತಮ್ಮ ಈ ಕೃತಿಯನ್ನು ಗುಂಡಮ್ಮನಂತಹ ಎಲ್ಲ ತಾಯಂದಿರಿಗೂ ಅರ್ಪಿಸುತ್ತಾರೆ.

ಸಕಲ ಧರ್ಮದ ಸಾರವು ದಯೆಯೆಂದು ಭಾವಿಸಿ ಸಹಿಷ್ಣುತಾ ದೃಷ್ಟಿಯಿಂದ ಜೀವಿಸಿದರೆ ಯುದ್ಧವೆಂಬುದೇ ಇಲ್ಲ. ಬದುಕನ್ನು ನೆಮ್ಮದಿಯಿಂದ ಸಾಗಿಸಬಹುದಾಗಿದೆ. ಆದರೆ ಪ್ರಸ್ತುತ ಜಗತ್ತಿನಲ್ಲಿ ಮಾನವ ಎಷ್ಟೋ ತಾಂತ್ರಿಕವಾಗಿ ಮುಂದುವರಿದಿದ್ದೇನೆ ಎಂದು ಹೇಳಿದರೂ ಸಹ ದಿನದಿಂದ ದಿನಕ್ಕೆ ಅವನ ಮನಸ್ಸು ಸಂಕುಚಿತಗೊಳ್ಳುತ್ತಿದೆ. ಮನುಷ್ಯನ ಬದುಕಿನಲ್ಲಿ ತಾಳ್ಮೆ, ಸಂಯಮ, ಪ್ರೀತಿ, ಕರುಣೆ, ದಯೆ ಎಂಬ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಇದರಿಂದ ಬದುಕು ದಿನದಿಂದ ದಿನಕ್ಕೆ ಸಂಕೀರ್ಣವಾಗುತ್ತಾ ಸಾಗಿ ಒತ್ತಡಗಳು ಹೆಚ್ಚುತ್ತಿವೆ. ದುಡ್ಡಿಗಾಗಿ ತಂದೆ ತಾಯಿಯನ್ನೇ ಕೊಲ್ಲುವ ಸ್ಥಿತಿ ಬಂದೊದಗಿದೆ, ತಂದೆಯೇ ಮಗಳ ಮೇಲೆ ಅತ್ಯಾಚಾರ ಮಾಡುತ್ತಿದ್ದಾರೆ, ವಯಸ್ಸಾದ ತಂದೆ-ತಾಯಿಗಳನ್ನು ವೃದ್ಧಾಶ್ರಮಕ್ಕೆ ಕಳುಹಿಸುತ್ತಿದ್ದಾರೆ. ಆಧುನಿಕತೆಯ ಹೆಸರಿನಲ್ಲಿ ವಿಭಕ್ತ ಕುಟುಂಬಗಳು ಕಂಡು ಬರುತ್ತಿವೆ. ಇನ್ನೂ ವಿವಾಹ

ವಿಚ್ಛೇದನಗಳಂತೂ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಾ ಸಾಗಿದೆ. ಆದರೆ ಬದುಕಿನಲ್ಲಿ ನೈತಿಕ ಪ್ರಜ್ಞೆಯೂ ಕುಸಿಯುತ್ತಾ "ಹಿಟ್ಲರ್ ಎಲ್ಲಿ ಬೇಕಾದರೂ ಜನಿಸಬಹುದು" ಎಂಬ ನೇಮಿಚಂದ್ರರ ಮಾತನ್ನು ನಿಜವಾಗಿಸುವತ್ತಾ ಸಾಗಿದೆ.

**ಸಾವು ಮತ್ತು ಮಾನವ:**

ಹುಟ್ಟಿದ ಪ್ರತಿಯೊಂದು ಜೀವಿಯು ಮರಣವನ್ನು ಹೊಂದಲೇಬೇಕು. ಆದರೆ ಸಾವು ಸ್ವಾಭಾವಿಕವಾಗಬೇಕು. ಬದಲಿಗೆ ತನ್ನ ಸ್ವ-ಇಚ್ಛೆಯಿಂದಲೋ, ಬೇರೆಯವರೂ ಹತ್ಯೆ ಮಾಡುವ ಮೂಲಕ ಆಗಬಾರದು. ಮನುಷ್ಯಗೆ ಸಾವು ಖಚಿತವೆಂದು ತಿಳಿದಿದ್ದರೂ ಸಹ ಮಾನವರು ಯಾವುದೇ ಲೋಭಕ್ಕೆ ಒಳಗಾದವರಂತೆ ಇತರರ ಮೇಲೆ ಹಿಂಸೆಯನ್ನು ಮಾಡುತ್ತಾರೆ. ಆರು ಮಿಲಿಯನ್ ಯಹೂದಿಗಳಿಗೆ ನರಕ ದರ್ಶನವನ್ನು ಮಾಡಿಸಿದ, ನೂತನ ಧರ್ಮ ಸಂಸ್ಥಾಪನೆ ಮಾಡಲು ಹೊರಟ ಹಿಟ್ಲರ್ ಚಿರಂಜೀವಿಯೇ ಎಂದು ನೋಡಿದರೆ ಅವನು ಒಂದು ದಿನ ಮರಣಿಸಿದ. ಆದರೆ ಅವನು ಕೈಗೊಂಡ ಕ್ರೌರ್ಯ ಇತಿಹಾಸದ ಪುಟದಲ್ಲಿ ಶಾಶ್ವತವಾಗಿ ಉಳಿಯಿತು.

ಯಾದ್-ವಶೇಮ್ ಕಾದಂಬರಿಯಲ್ಲಿಯೂ ಸಹ ಸಾಲು-ಸಾಲು ಸಾವುಗಳ ದರ್ಶನವಾಗುತ್ತದೆ. ಆದರೆ ಅವರೆಲ್ಲರ ಸಾವು ವಿಭಿನ್ನವಾಗಿ ಸಂಭವಿಸಿದವುಗಳಾಗಿವೆ. ವಿವೇಕನ ತಾತ, ವಿವೇಕನ ಅಮ್ಮ-ಅಪ್ಪ ಮತ್ತು ಹ್ಯಾನಾಳ ತಂದೆಯ ಸಾವುಗಳು ಸ್ವಾಭಾವಿಕವಾದರೆ, ಹ್ಯಾನಾಳ ತಾಯಿ ಮತ್ತು ತಮ್ಮ ಬಲಹೀನರಾಗಿ, ಅಶಕ್ತರೆಂದು ಪರಿಗಣಿಸಿ ಸಾಯಿಸಲ್ಪಡುತ್ತಾರೆ. ರೆಬೆಕ್ಕಾಳ ಸ್ನೇಹಿತೆಯನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿ ಸಾಯಿಸಲಾಗುತ್ತದೆ. ಸೆರೆಯಾಳುಗಳು ವೈಜ್ಞಾನಿಕ ಪ್ರಯೋಗಕ್ಕೆ ಒಳಪಟ್ಟೋ, ಹಸಿವಿನಿಂದಲೋ, ತಪ್ಪಿಸಿಕೊಳ್ಳಲು ಪ್ರಯತ್ನಿಸಿಯೋ ಸಾವನ್ನು ಅಪ್ಪುತ್ತಾರೆ.

ಪ್ರಸ್ತುತ ಜಗತ್ತಿನಲ್ಲಿ ಸಹ ಭಯೋತ್ಪಾದನೆ, ಕೋಮುಗಲಭೆ, ಮರ್ಯಾದ ಹತ್ಯೆ, ಹೊಸ ಹೊಸ ವೈರಸ್‌ಗಳನ್ನು ಸೃಷ್ಟಿಸಿ, ಅನೇಕ ಮಾರಣಾಂತಿಕ ಖಾಯಿಲೆಗಳು, ಆಧುನಿಕ ಜೀವನ ಶೈಲಿ, ಮಾನವರ ಜೀವಕ್ಕೆ ಹಾನಿಯುಂಟು ಮಾಡುವುದು. ಉದಾ:- ಕೋವಿಡ್, ಬಯೋವಾರ್‌ಗಳು, ಅಣುಬಾಂಬ್ ದಾಳಿ, ದಾರಿ ತಪ್ಪಿದ ಜೀವನದಿಂದ ಏಡ್ಸ್‌ನಂತಹ ಭೀಕರ ಮಾರಣಾಂತಿಕ ಖಾಯಿಲೆಗಳಿಗೆ ಒಳಗಾಗಿ ಸಾವು ಸಂಭವಿಸುತ್ತಿದೆ. ಹೀಗೆ ಸಾಲು ದುಷ್ಕೃತ್ಯಗಳಿಂದಾಗಿ ಮಾನವನ ಜೀವನಕ್ಕೆ ಭರವಸೆಯಿಲ್ಲದೆ ಅವನತಿಯತ್ತ ಸಾಗುವುದನ್ನು ಕಾಣಬಹುದು. ಸಾವು ಸ್ವೀಕಾರಾರ್ಹ. ಅದು ಪ್ರಕೃತಿದತ್ತವಾದರೆ ಮಾತ್ರ. ಆದರೆ ಅದು ಮಾನವನ ಕ್ರೌರ್ಯದಿಂದ ಆಗಬಾರದು.

**ಸಮರೋಪ:**

**"ದಯವಿಲ್ಲದ ಧರ್ಮವದೇವುದಯ್ಯ**
**ದಯವೇ ಬೇಕು ಸರ್ವ ಪ್ರಾಣಿಗಳೆಲ್ಲರಲ್ಲಿ**

ದಯವೇ ಧರ್ಮದ ಮೂಲವಯ್ಯ”

ಎಂಬ ಬಸವಣ್ಣನವರ ಯುಕ್ತಿಯಂತೆ ಸಕಲ ಧರ್ಮದ ಸಾರವೂ ಪ್ರೀತಿ, ಕರುಣೆ, ದಯೆಯೇ ಆಗಿದೆ. ಇದನ್ನು ಮತ್ತೊಮ್ಮೆ ನೆನಪಿಸುವಂತೆ 2007ರಲ್ಲಿ ನೇಮಿಚಂದ್ರರ ‘ಯಾದ್ ವಶೇಮ್’ ಪ್ರಕಟವಾಯಿತು. ಅದನ್ನೇ ಅವರು ‘ನೂರು ಸಾವಿರ ಸಾವಿನ ನೆನಪು’ ಎಂಬ ಹೆಸರಿನಲ್ಲಿ ಸುಧಾ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಗೋರಿಗಳು ಸಹಾ ಒಂದು ಉತ್ಕೃಷ್ಟ ಕೃತಿಗೆ ಕಥಾವಸ್ತುವಾಗಬಹುದು ಎಂದು ಇದರಿಂದ ತಿಳಿಯುತ್ತದೆ. ಇಲ್ಲಿ ಹಿಟ್ಲರ್‌ನ ನೆಲದಿಂದ ಗಾಂಧಿಯ ನೆಲವಾದ ಮುಕ್ಕೋಟಿ ದೇವರುಗಳಿಗೆ ಹೆಸರಾದ ಭಾರತಕ್ಕೆ ಬಂದ ಪುಟ್ಟ ಯಹೂದಿ ಬಾಲಕಿ ಹ್ಯಾನಾಳ ಕಥೆ. ಒಂದು ಕಾಲ್ಪನಿಕ ಕಥೆಯನ್ನು ಸೃಷ್ಟಿಸಿ ಆ ಮೂಲಕ ಧರ್ಮದ ಹೆಸರಿನಲ್ಲಿ ಹಿಟ್ಲರ್ ನಡೆಸಿದ ಕ್ರೌರ್ಯ, ಹಿಂಸೆ, ರಕ್ತಪಾತ, ಅತ್ಯಾಚಾರಗಳ ಒಂದು ದುರಂತ ಚಿತ್ರಣವನ್ನೇ ನೇಮಿಚಂದ್ರರು ನೀಡುತ್ತಾರೆ. ಹಿಟ್ಲರ್‌ನ ಭೀಕರ ಧರ್ಮಾಂಧತೆಯಿಂದ ಉರಿದ ಜರ್ಮನಿ ಜನ, ಅವರ ಬದುಕು ಸಾವುಗಳ ಚಿತ್ರಣವನ್ನು ಬಹಳ ಮನೋಜ್ಞವಾಗಿ ನಿರೂಪಿಸಿದ್ದಾರೆ. ಜೊತೆಗೆ ಭಾರತವು ಬಹುಧರ್ಮೀಯ ರಾಷ್ಟ್ರವಾಗಿದ್ದರೂ ಇಲ್ಲಿರುವ ಧರ್ಮ ಸಹಿಷ್ಣುತಾ ಮನೋಭಾವ, ಪ್ರೀತಿ, ಪರಸ್ಪರ ಸಹಕಾರ ಎಲ್ಲದರ ಬಗ್ಗೆ ಹ್ಯಾನಾಳ ಮೂಲಕ ನಿರೂಪಿಸಿ ಭಾರತದಲ್ಲಿ ಹ್ಯಾನಾಳಾಗಿ ಯೋಚಿಸುವ ನಾಯಕಿ, ಯಹೂದಿಗಳ ನೆಲೆಯಲ್ಲಿ ಅಪ್ಪಟ ಭಾರತೀಯ ಸ್ತ್ರೀ ಅನಿತಾಳಾಗಿ ವರ್ತಿಸುವ, ಚಿಂತಿಸುವ ಹಾಗೂ ಭಾರತಕ್ಕೆ ಮರಳಲು ತವಕಿಸುವ ಮೂಲಕ ಬೀಜವು ಯಾವ ಭೂಮಿಯ ಮೇಲೂ ಬಿದ್ದರೂ ಅದು ಚಿಗುರೊಡೆದು ಬೆಳೆದು ತನ್ನ ಕ್ಷೇತ್ರವನ್ನು ವಿಸ್ತರಿಸಿ ನೆಲೆನಿಲ್ಲುತ್ತದೆ ಎಂಬುದನ್ನು ಅನಿತಾಳ ಮೂಲಕ ನೇಮಿಚಂದ್ರರು ನಿರೂಪಿಸಿದ್ದಾರೆ.

## ಪರಾಮರ್ಶನ ಗ್ರಂಥಗಳು:

1. ನೇಮಿಚಂದ್ರ, (2007), ಯಾದ್ ವಶೇಮ್, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.
2. ಡಿ.ವಿ.ಜಿ. (1999), ಮಂಕು ತಿಮ್ಮನ ಕಗ್ಗ, ಶ್ರೀರಂಗ ಪ್ರಿಂಟರ್ಸ್, ಬೆಂಗಳೂರು.
3. ಮುತ್ತೇಗೌಡ ಟಿ.ಎನ್., (2012), ನವೋದಯ ಕಾದಂಬರಿಗಳಲ್ಲಿ ಧರ್ಮ ಜಿಜ್ಞಾಸೆ, ಯುವಸಾಧನೆ, ಬೆಂಗಳೂರು.
4. ಮರುಳಸಿದ್ದಪ್ಪ ಕೆ. (ಸಂ.), (2003) ಶತಮಾನದ ನಾಟಕ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

**Funding:**
This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.